# ಆಹಾ ಸುದ್ದಿ!

★ ಸಸಿತೋಟ



ಅಮೆರಿಕಾದ ಅಧ್ಯಕ್ಷ ಒಬಾಮ ಅಥವಾ ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಮಿಟ್‌ಗೆ 'ಸಾಸೀಜ್ (ಮಾಂಸದ ತಿನಿಸು) ಅಥವಾ ಪೆಪ್ಪರೋನಿ?' ಎಂಬ ಪ್ರಶ್ನೆ ಕೇಳಬೇಕು. ಕೇಳಿದವರಿಗೆ 30 ವರ್ಷಗಳ ಕಾಲ ವಾರಕ್ಕೊಂದು ದೊಡ್ಡ ಪಿಜ್ಜಾ ಮತ್ತು ಪೈ ಅನ್ನು ಪಿಜ್ಜಾ ಹಟ್ ಉಚಿತವಾಗಿ ನೀಡುತ್ತದಂತೆ. 'ನಾನು ಪಿಜ್ಜಾ ತಿನ್ನುವುದಿಲ್ಲಪ್ಪಾ' ಎಂದು ನುಣುಚಿಕೊಳ್ಳುವವರಿಗೆ 15,600 ಡಾಲರ್ ಆಮಿಷವನ್ನೂ ಹಟ್ ಒಡ್ಡಿದೆ. ಹಿಮ್ಮತ್ ಇದೆಯಾ ನಿಮ್ಮಲ್ಲಿ?

ಟೀವಿ ಸಂಗೀತ ಸ್ಪರ್ಧೆಗೆ ಇಳಿಯುವವರು ಹುಷಾರಾಗಿರಿ. ನಿಮಗೆ ಪ್ರತಿಸ್ಪರ್ಧಿಯಾಗಿ ಇಲಿರಾಯ ಬರುವ ದಿನ ದೂರವಿಲ್ಲ. ಕಂಡಿದ್ದನ್ನೆಲ್ಲ ಕಡಿಯುವ ಮೂಷಕ ಹಾಡಲೂ ಬಲ್ಲದು ಎನ್ನುತ್ತದೆ ನ್ಯೂ ಓರ್ಲಿಯನ್ಸ್ ವಿಶ್ವವಿದ್ಯಾನಿಲಯದ ಅಧ್ಯಯನ. ಗೆಳತಿಯನ್ನು ಆಕರ್ಷಿಸುವ ಮೂಷಿಕದ ಕಸರತ್ತಿದು ಎಂದು ಮೂಗು ಮುರಿಯುವ ಹಾಗೂ ಇಲ್ಲ. ಏಕೆಂದರೆ ಇದು ಗ್ರೂಪ್ ಸಾಂಗ್. ಇವು ಒಂದೇ ರಾಗದಲ್ಲಿ ಸಾಮೂಹಿಕವಾಗಿ ಗಂಟಲನ್ನು ಸರಿಪಡಿಸಿಕೊಂಡು ಏರುದನಿಯಲ್ಲಿ ಹಾಡುತ್ತವಂತೆ. 'ಇಂಡಿಯನ್ ಐಡಲ್' ಶೋ ಅನ್ನು ಮಿಕಿಮೌಸ್‌ಗಳಿಗೆಂದೇ ಏರ್ಪಡಿಸಲು ಅಡ್ಡಿಯಿಲ್ಲ.



ಬ್ರೆಜಿಲ್‌ನ ಸಿಲ್ವಾಗೆ ಮನೆ ಕಟ್ಟುವ ಮನಸ್ಸಾಯಿತು. ಮರಳು, ಕಲ್ಲು, ಸಿಮೆಂಟ್, ಕಬ್ಬಿಣ ಎಂದು ಖಜಾನೆಗೆ ಕನ್ನ ಹಾಕುವಂತಹ ಪರಿಸ್ಥಿತಿ ತಂದುಕೊಳ್ಳುವ ಗೋಜಲಿಗೆ ಹೋಗಲಿಲ್ಲ ಈ ಭೂಪ. ಹಾದಿ, ಬೀದಿಯಲ್ಲಿ ಬಿದ್ದಂತಹ ಸಾಮಗ್ರಿಗಳನ್ನೆಲ್ಲಾ ಸಂಗ್ರಹಿಸಿದ. ಮಕ್ಕಳು ಆಡಿ ಬಿಸಾಡಿದಂತಹ ಆಟಿಕೆಗಳನ್ನೂ ಜತನವಾಗಿ ತೆಗೆದಿಟ್ಟುಕೊಂಡ. ತಾನೇ ಬಡಗಿಯಾದ, ಗಾರೆಯವನಾದ. ಸಾವೊ ಪೋಲೋದ ಪಾರ್ಕ್‌ನ ಈ ಮಾಲಿ ಈಗ ಚಿತ್ರ- ವಿಚಿತ್ರವಾದ ಮನೆಯ ಮಾಲೀಕನೂ ಆಗಿದ್ದು, ಜನ ಮನೆಯ ಜೊತೆ ಮಾಲೀಕನನ್ನೂ ನೋಡಲು ಮುಗಿಬೀಳುತ್ತಿದ್ದಾರಂತೆ.

ಲಿಂಬೆಹಣ್ಣಿನಷ್ಟು ದೊಡ್ಡ ಗಾತ್ರದ ವಜ್ರ ಎಂದರೆ ಕಣ್ಣು, ಮೂಗು ಅರಳಿಸುವುದನ್ನು ಮರೆತುಬಿಡಿ. ಭೂಮಿಯ ಎರಡು ಪಟ್ಟು ಗಾತ್ರದ ವಜ್ರವೊಂದನ್ನು ಖಗೋಳ ಯಾತ್ರಿಗಳು ಕಂಡು ಹಿಡಿದಿದ್ದಾರೆ. ಯಾರಪ್ಪ ಇದನ್ನು ಧರಿಸುವುದು, ಇದನ್ನು ಕಟ್ಟಲು ಎಷ್ಟು ಟನ್ ಚಿನ್ನ ಬೇಕು ಎಂಬ ಲೆಕ್ಕಾಚಾರಕ್ಕೆ ಇಳಿಯುವ ಮುನ್ನ ಸಣ್ಣ ಮಾತು- ಈ ವಜ್ರ 'ಕ್ಯಾಂಕ್ರಿ ಇ' ಎಂಬ ಗ್ರಹದ ಮೇಲೈ ಅಂತೆ. 'ಹೋಗಿ.. ತನ್ನಿ..' ಎಂದು ಗಂಡನನ್ನು ಕಾಡುವ ಮೊದಲು ಇನ್ನೊಂದು ಸುದ್ದಿ- ಇದು ಭೂಮಿಯಿಂದ 230 ಟ್ರಿಲಿಯನ್ ಮೈಲು ದೂರದಲ್ಲಿದೆ. ಜೊತೆಗೆ ಉಷ್ಣಾಂಶ 1648 ಡಿ. ಸೆ.! 'ವಜ್ರ ಗ್ರಹ' ಕಣ್ಣಿಗೆ ಕಂಡರೂ ಕೈಗೆ ಉಂಗುರವಾಗಿ ಬರುವುದೆಂದು?

ಚೀನಾದ ಈ ಅಂಗವಿಕಲ ಆಡು ತಲೆ ಓಡಿಸಿದೆ. ಹುಟ್ಟುವಾಗಲೇ ಹಿಂಗಾಲುಗಳೆರಡೂ ವಿರೂಪಗೊಂಡಿದ್ದವು. ಹುಟ್ಟಿದ ಮೂರೇ ದಿನಗಳಲ್ಲಿ ಮುಂದಿನ ಎರಡು ಕಾಲುಗಳಲ್ಲಿ ಓಡಾಡುವ ರೂಢಿ ಮಾಡಿಕೊಂಡಿತು. ಚೀನಿ ಅಂಶ- ಅದು ಜನರಲ್ಲಿದ್ದರೇನು, ಆಡಲ್ಲಿದ್ದರೇನು ಎಲ್ಲಿದ್ದರೂ ಸಲ್ಲುವುದು!



ಬಾರ್‌ನಲ್ಲಿ ಕಾಕ್‌ಟೇಲ್ ಬೆಲೆ ಎಷ್ಟಿರಬಹುದು? ಲಂಡನ್ನಿನ 'ಸಾಲ್ವೆಟೋರ್ ಪ್ಲೇಬಾಯ್ ಕ್ಲಬ್' ಬಾರ್‌ನ ಒಡೆಯ ಸಾಲ್ವೆಟೋರ್ 'ಗಿನ್ನೆಸ್ ದಾಖಲೆ ಮಾಡುವಷ್ಟು' ಎಂದು ದರಪಟ್ಟಿ ಮುಂದಿಡುತ್ತಾನೆ. ಈತ ಮಿಕ್ಸ್ ಮಾಡಿದ ಒಂದು ಗ್ಲಾಸ್ ಕಾಕ್ ಟೇಲ್ ಬೆಲೆ 5,500 ಪೌಂಡ್. ದುಬಾರಿ ಡ್ರಿಂಕ್ಸ್‌ಗಳನ್ನೆಲ್ಲ ಗುಡ್ಡೆ ಹಾಕಿಕೊಂಡು ಎಲ್ಲದರಿಂದ ಒಂದೊಂದೇ ಹನಿ, ಒಂದೊಂದೇ ಔನ್ಸ್ ಎಂದು ಎಳೆದು ಸೇರಿಸಿದ್ದಾನೆ. ಕಾಕ್‌ಟೇಲ್ ತಯಾರಿಸಿದವನೇನೋ ದಾಖಲೆ ಮುರಿದ. ಅದನ್ನು ಕುಡಿದವ ಬಿಲ್ ಬಂದ ಕೂಡಲೇ ಟೇಬಲ್, ಕುರ್ಚಿ ಮುರಿಯಬಹುದೇನೋ!

